ಸಹಕಾರಿಗಳ ನಿಬಂಧಕರ ಕಛೇರಿ
ನಂ. 1, ಅಲಿಅಸ್ಕರ್ ರಸ್ತೆ,
ಬೆಂಗಳೂರು - 560 052.

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ನಿಬಂಧಕರು ಹಾಗೂ ಚೀಟಿ ಪ್ರಬಂಧಕರ ಕಛೇರಿ, ನಂ,1. ಅಲಿ ಆಸ್ಕರ್ ರಸ್ತೆ. ಬೆಂಗಳೂರು-52.**

**ಸಂಖ್ಯೆ: ಆರ್‌ಸಿಎಸ್/ಎನ್‌ಎಂಎಲ್-2/ವೈಎಂಸಿ/36/2021-22** **ದಿನಾಂಕ: 02-12-2021**

ವಿಷಯ:- ಪಂಚತಾರಾ ಚಿಟ್ಸ್ ಪ್ರೈವೇಟ್ ಲಿ., ನಂ.12, 1ನೇ ಮಹಡಿ, ಕೆನರಾ ಬ್ಯಾಂಕ್ ಹತ್ತಿರ ಗಜಾನನ ನಗರ, ಹೆಗ್ಗನಹಳ್ಳಿ ಕ್ರಾಸ್, ಬೆಂಗಳೂರು-560091 ಇವರಿಗೆ ಹೊಸದಾಗಿ ಚೀಟಿ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- 1. ಫೋರ್‌ಮನ್ ಇವರ ಪತ್ರ ದಿನಾಂಕ: 16-11-2021.
2. ಶಾಖೆಯ ಸಹಕಾರಿ ಅಭಿವೃದ್ಧಿ ಅಧಿಕಾರಿ ಇವರ ಸ್ಥಳ ಪರಿಶೀಲನಾ ವರದಿ ದಿ: 30.11.2021

*******

**ಪ್ರಸ್ತಾವೆ:**

ಪಂಚತಾರಾ ಚಿಟ್ಸ್ ಪ್ರೈವೇಟ್ ಲಿ., ನಂ.12, 1ನೇ ಮಹಡಿ, ಕೆನರಾ ಬ್ಯಾಂಕ್ ಹತ್ತಿರ ಗಜಾನನ ನಗರ, ಹೆಗ್ಗನಹಳ್ಳಿ ಕ್ರಾಸ್, ಬೆಂಗಳೂರು-560091 ಈ ಸಂಸ್ಥೆಯು ಹೊಸದಾಗಿ ಚೀಟಿ ವ್ಯವಹಾರ ನಡೆಸಲು ಅನುಮತಿ ಕೋರಿ ಉಲ್ಲೇಖ (1)ರಲ್ಲಿ ಸಲ್ಲಿಸಿರುವ ಪ್ರಸ್ತಾವೆಯನ್ನು ಪರಿಶೀಲಿಸಿದೆ. ಈ ಸಂಸ್ಥೆಯು ಚೀಟಿ ನಿಧಿಗಳ ಕಾಯ್ದೆ 1982ರ ಅವಕಾಶಗಳಿಗೆ ಒಳಪಟ್ಟು ಸ್ಥಳ ಪರಿಶೀಲನೆ ನಡೆಸಿ ಎಲ್ಲಾ ಅವಶ್ಯಕ ಮಾನದಂಡಗಳನ್ನು ಹೊಂದಿರುವುದಾಗಿ ತಿಳಿಸಿ ಹೊಸದಾಗಿ ಚೀಟಿ ವ್ಯವಹಾರ ನಡೆಸಲು ಅನುಮತಿ ಕೋರಿ ಸಲ್ಲಿಸಲಾಗಿದ್ದ ಪ್ರಸ್ತಾವೆಯನ್ನು ಆಧರಿಸಿ ಹಾಗೂ ಉಲ್ಲೇಖ-2ರ ಸ್ಥಳ ಪರಿಶೀಲನಾ ವರದಿಯ ಶಿಫಾರಸ್ಸಿನನ್ವಯ ಸಂಸ್ಥೆ ಸಲ್ಲಿಸಿರುವ ದಾಖಲಾತಿಗಳ ವಿವರಗಳನ್ನು ಈ ಕೆಳಕಂಡಂತೆ ಗಮನಿಸಿದೆ.

<table>
<tr><td>1</td><td>ಸಂಸ್ಥೆಯ ಹೆಸರು ಮತ್ತು ವಿಳಾಸ</td><td colspan="4">ಪಂಚತಾರಾ ಚಿಟ್ಸ್ ಪ್ರೈವೇಟ್ ಲಿ., ನಂ.12, 1ನೇ ಮಹಡಿ, ಕೆನರಾ ಬ್ಯಾಂಕ್ ಹತ್ತಿರ ಗಜಾನನ ನಗರ, ಹೆಗ್ಗನಹಳ್ಳಿ ಕ್ರಾಸ್, ಬೆಂಗಳೂರು-560091</td></tr>
<tr><td>2</td><td>ಕಂಪೆನಿ ನೊಂದಣಿ ವಿವರ</td><td colspan="4">ಕಂಪನಿ ಕಾಯ್ದೆ 2013ರ ರೀತ್ಯಾ ದಿನಾಂಕ: 23.10.2021 ರಂದು ನೋಂದಣಿಯಾಗಿರುತ್ತದೆ. ನೋಂದಣಿ ಸಂಖ್ಯೆ. U65992KA2021PTC153481</td></tr>
<tr><td>3</td><td>PAN ಸಂಖ್ಯೆ</td><td colspan="4">AAMCP4078Q</td></tr>
<tr><td>4</td><td>TAN ಸಂಖ್ಯೆ</td><td colspan="4">BLRB27813C</td></tr>
<tr><td>5</td><td>GST ಸಂಖ್ಯೆ</td><td colspan="4">29AAMCP4078QIZC</td></tr>
<tr><td rowspan="3">6</td><td rowspan="3">ನಿರ್ದೇಶಕರು/ ಪದಾಧಿಕಾರಿಗಳ ವಿವರ</td><td>ಸಂ</td><td>ಹೆಸರು</td><td>ಹುದ್ದೆ</td><td>ವಿಳಾಸ</td></tr>
<tr><td>1</td><td>ಶ್ರೀ ಶಿವಾನಂದ ಮಾದಪ್ಪನದೊಡ್ಡಿ ಆಧಾರ್ ನಂ. 3785 0208 1658</td><td>ಫೋರ್‌ಮನ್</td><td>ಬಿನ್ ನಾಗರಾಜು, ನಂ.1027, 2ನೇ ಮುಖ್ಯ ರಸ್ತೆ, ರಾಜಗೋಪಾಲ ನಗರ, 2ನೇ ಹಂತ, ಪೀಣ್ಯ, ರಾಜಗೋಪಾಲನಗರ ಪೋಲೀಸ್ ಠಾಣೆ ಹಿಂಭಾಗ, ಪೀಣ್ಯಾ ಸಣ್ಣ ಕೈಗಾರಿಕೆ, ಬೆಂಗಳೂರು-560058.</td></tr>
<tr><td>2</td><td>ಶ್ರೀ. ಕರಿಗೌಡ ಪ್ರಸನ್ನ ಆಧಾರ್ ನಂ. 3682 5368 6481</td><td>ನಿರ್ದೇಶಕರು</td><td>ನಂ.72, ಆನೇದೊಡ್ಡಿಹಳ್ಳಿ, ಮದ್ದೂರು ತಾ॥, ಕೊಪ್ಪ ಹೋಬಳಿ</td></tr>
</table>

| | | | | | |
|---|---|---|---|---|---|
| | | 3 | ಶ್ರೀ ಕಣಕುಪ್ಪೆ ಸಿಸ್ಸಪ್ಪ ಗಿರೀಶ ಆಧಾರ್ ನಂ. 6155 3134 2329 | | ಕಣಕುಪ್ಪೆಹಳ್ಳಿ, ಕಣಕುಪ್ಪೆ ಅಂಚೆ ಹೆಬ್ಬಾರ ಹೋಬಳಿ, ತುಮಕೂರು ತಾ॥ ಮತ್ತು ಜಿಲ್ಲೆ. |
| | | 4 | ಶ್ರೀವೇಣುಗೋಪಾಲ್ ಆಧಾರ್ ನಂ. 4883 2468 6141 | | ಬಿನ್ ವೀರಭದ್ರಯ್ಯ, ಮಲ್ಲಸಂದ್ರ, ಸೊಂಡೆಕೊಪ್ಪ, ಬೆಂಗಳೂರು-562130 |
| 7 | ಷೇರು ಬಂಡವಾಳ | ರೂ.15.00 ಲಕ್ಷಗಳು | | | |
| 8 | ಚೀಟಿ ನಡೆಸಲು ಹೂಡಿರುವ ಬಂಡವಾಳ ಹಾಗು ಬ್ಯಾಂಕ್ ವಿವರ | ಕರೂರು ವೈಶ್ಯ ಬ್ಯಾಂಕ್ ಇಲ್ಲಿನ CA-KVB-ECONOMY ಖಾತೆ ಸಂ.1350135000001153 ರಲ್ಲಿ ದಿನಾಂಕ: 05.10.2021 ರೂ.1,10,000/- (ರೂಪಾಯಿ ಒಂದು ಲಕ್ಷದ ಹತ್ತು ಸಾವಿರ ಮಾತ್ರ) | | | |
| 9 | ಕ್ರಿಮಿನಲ್ ಪ್ರಕರಣಗಳ ಬಗ್ಗೆ ವಿವರ | ಫೋರ್‌ಮನ್ ಹಾಗೂ ನಿರ್ದೇಶಕರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳು ದಾಖಲಾಗಿಲ್ಲದಿರುವ ಬಗ್ಗೆ ಪೋಲೀಸ್ ವೆರಿಫಿಕೇಷನ್ ಸರ್ಟಿಫಿಕೇಟ್ (ದಿ: 17.11.2021) ಸಲ್ಲಿಸಿರುತ್ತಾರೆ. | | | |
| 10 | ಫೋರ್‌ಮನ್ ನೇಮಕದ ಬಗ್ಗೆ | ದಿ: 01.11.2021 ರಂದು ಫೋರ್‌ಮನ್ ನೇಮಕ ಮಾಡಿಕೊಂಡ ಬಗ್ಗೆ ಸಭಾ ನಡವಳಿಗಳನ್ನು ಸಲ್ಲಿಸಿರುತ್ತಾರೆ. | | | |

ಸಂಸ್ಥೆ ಸಲ್ಲಿಸಿರುವ ದಾಖಲಾತಿಗಳು ಹಾಗೂ ಶಾಖೆಯ ಸಹಕಾರ ಅಭಿವೃದ್ಧಿ ಅಧಿಕಾರಿ ಇವರ ಶಿಫಾರಸ್ಸು ವರದಿ ಆಧರಿಸಿ, ಚೀಟಿ ಅಧಿನಿಯಮ 1982 ರ ಪ್ರಕರಣ 19(1) ಪ್ರಕಾರ ಚೀಟಿ ವ್ಯವಹಾರ ಪ್ರಾರಂಭಿಸಲು ಷರತ್ತುಬದ್ಧ ಅನುಮತಿ ನೀಡುವ ಕುರಿತು ಈ ಕೆಳಕಂಡ ಆದೇಶ.

## ಆ ದೇ ಶ

ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 19(1) ರ ಪ್ರಕಾರ ದತ್ತವಾದ ಅಧಿಕಾರವನ್ನು ಚಲಾಯಿಸಿ, ಎಸ್.ಜಿಯಾಉಲ್ಲಾ ಭಾ.ಆ.ಸೇ., ಸಹಕಾರ ಸಂಘಗಳ ನಿಬಂಧಕರು, ಹಾಗೂ ಚೀಟಿ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಆದ ನಾನು ಪಂಚತಾರಾ ಚಿಟ್ಸ್ ಪ್ರೈವೇಟ್ ಲಿ., ನಂ.12, 1ನೇ ಮಹಡಿ, ಕೆನರಾ ಬ್ಯಾಂಕ್ ಹತ್ತಿರ ಗಜಾನನ ನಗರ, ಹೆಗ್ಗನಹಳ್ಳಿ ಕ್ರಾಸ್, ಬೆಂಗಳೂರು-560091 ಈ ಸಂಸ್ಥೆಯು ಹೊಸದಾಗಿ ಚೀಟಿ ವ್ಯವಹಾರ ಪ್ರಾರಂಭಿಸಲು ಇದರ ಫೋರ್‌ಮನ್ ಇವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿರುತ್ತೇನೆ.

**"ಷರತ್ತುಗಳು"**

1. ಚೀಟಿ ನಿಧಿಗಳ ಕಾಯ್ದೆ 1982ರ ಕಲಂ 19(1)ರ ಈ ಅನುಮತಿಯು ಚೀಟಿ ವ್ಯವಹಾರ ಪ್ರಾರಂಭಿಸಲು ಮಾತ್ರ ಸೀಮಿತವಾಗಿದ್ದು ಚೀಟಿ ಗುಂಪು ರಚನೆಗೆ (Group/Groups) ಚೀಟಿ ಗುಂಪು ಮೊತ್ತಕ್ಕೆ ಅನುಗುಣವಾಗಿ ಕಾರ್ಯವ್ಯಾಪ್ತಿ ಸಹಕಾರ ಸಂಘಗಳ ಉಪನಿಬಂಧಕರು/ಸಹಕಾರ ಸಂಘಗಳ ಸಹಾಯಕ ನಿಬಂಧಕರವರಿಂದ ಅನುಮತಿ ಪಡೆದು ಚೀಟಿ ಗುಂಪು ಪ್ರಾರಂಭಿಸಬೇಕಾಗಿರುತ್ತದೆ.
2. ಈ ಸಂಸ್ಥೆಯು ಚೀಟಿ ನಿಧಿ ಅಧಿನಿಯಮ 1982 ಹಾಗೂ ನಿಯಮಗಳು 1983 ರನ್ವಯ ಚೀಟಿ ವ್ಯವಹಾರವನ್ನು ಮಾತ್ರ ನಡೆಸುವುದು. ಚೀಟಿ ನಿಧಿ ಕಾಯ್ದೆ 1982 ರ ಪ್ರಕರಣ (3)ಕ್ಕೆ ಪೂರಕವಾಗುವಂತೆ ಕಂಪನಿಯು ಮೆಮೋರಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನಲ್ಲಿ ಪೂರ್ವಾನುಮತಿ ಇಲ್ಲದೇ ಬದಲಾವಣೆ ಮಾಡತಕ್ಕದ್ದಲ್ಲ.

3. ಚೀಟಿ ನಿಧಿ ಕಾಯ್ದೆ ನಿಯಮ ಉಲ್ಲಂಘನೆಯಾಗಿರುವುದಿಲ್ಲವೆಂಬ ಮಾಹಿತಿಯನ್ನು ಪ್ರತಿ ಚೀಟಿ ಗುಂಪು ಪ್ರಾರಂಭಿಸುವಾಗ ಮತ್ತು ಕೊನೆಯಲ್ಲಿ ಭದ್ರತಾ ಠೇವಣಿ ಬಿಡುಗಡೆ ಸಂದರ್ಭದಲ್ಲಿ ಸಂಬಂಧಿತ ಪ್ರಾಧಿಕಾರಕ್ಕೆ ನೀಡತಕ್ಕದ್ದು.

4. ಸದರಿ ಸಂಸ್ಥೆಯು ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 4(1)ರ ಪ್ರಕಾರ ಚೀಟಿ ಗುಂಪುಗಳಿಗೆ ಪೂರ್ವಮಂಜೂರಾತಿ ಹಾಗೂ ಪ್ರಕರಣ 9(2)ರಂತೆ ಪ್ರಾರಂಭಿಕ ದೃಢೀಕರಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ವ್ಯವಹರಿಸತಕ್ಕದ್ದು.

5. ಚೀಟಿ ನಿಧಿ ಅಧಿನಿಯಮ 1982 ಪ್ರಕರಣ 12ರ ಪ್ರಕಾರ ಚೀಟಿ ವ್ಯವಹಾರವನ್ನು ಹೊರತುಪಡಿಸಿ ಇತರೆ ವ್ಯವಹಾರವನ್ನು ನಡೆಸತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ ಈ ಆದೇಶವನ್ನು ರದ್ದುಗೊಳಿಸಲಾಗುವುದು.

6. ಈ ಅನುಮತಿ ಆದೇಶಕ್ಕೆ ಲಗತ್ತಿಸಿರುವ ನಮೂನೆ-1 ರ ಮಾಹಿತಿಯನ್ನು ಈ ಅನುಮತಿ ಹೊರಡಿಸಿದ ಒಂದು ತಿಂಗಳೊಳಗಾಗಿ ಉಳಿತಾಯ ಖಾತೆ ಸಂಖ್ಯೆ ಒಳಗೊಂಡಂತೆ ಈ ಕಛೇರಿಗೆ ಸಲ್ಲಿಸತಕ್ಕದ್ದು ಮತ್ತು ಅದರಲ್ಲಿ ಕಾಲಕಾಲಕ್ಕೆ ಆಗುವ ಬದಲಾವಣೆಗಳನ್ನು, ಬದಲಾವಣೆಗೊಂಡ 2 ತಿಂಗಳೊಳಗೆ ಈ ಕಛೇರಿಗೆ ವರದಿ ಮಾಡತಕ್ಕದ್ದು, ತಪ್ಪಿದಲ್ಲಿ ಈ ಅನುಮತಿಯು ಸ್ವಯಂ ಚಾಲಿತವಾಗಿ ರದ್ದಾಗುವುದೆಂದು ತಿಳಿಯತಕ್ಕದ್ದು.

7. ನಿಬಂಧಕರು ಕಾಲ ಕಾಲಕ್ಕೆ ಹೊರಡಿಸುವ ನಿರ್ದೇಶನ/ಮಾರ್ಗಸೂಚಿ ಹಾಗೂ ಚೀಟಿ ನಿಧಿ ಅಧಿನಿಯಮ 1982 ಮತ್ತು ನಿಯಮಾವಳಿ 1983 ಕ್ಕೆ ತಿದ್ದುಪಡಿಯಾದ 3 ತಿಂಗಳೊಳಗಾಗಿ ಕಂಪನಿ ಅಳವಡಿಸಿಕೊಳ್ಳಲು ಬದ್ಧವಾಗಿರತಕ್ಕದ್ದು, ತಪ್ಪಿದಲ್ಲಿ ನೀಡಲಾದ ಅನುಮತಿಯನ್ನು ಯಾವುದೇ ಸಮಯ ದಲ್ಲಿ ರದ್ದುಪಡಿಸಲಾಗುವುದೆಂದು ತಿಳಿಯತಕ್ಕದ್ದು.

8. ಈ ಅನುಮತಿ ಆದೇಶದ ದಿನಾಂಕದಿಂದ ಆರು ತಿಂಗಳೊಳಗೆ ಸಂಸ್ಥೆಯು ಚೀಟಿ ವ್ಯವಹಾರವನ್ನು ಕೈಗೊಳ್ಳದಿದ್ದಲ್ಲಿ ಕಲಂ 19(1)ರ ಅನುಮತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

9. ಚೀಟಿ ನಿಧಿಗಳ ಕಾಯ್ದೆ ಕಲಂ 13ರ ಅವಕಾಶದಲ್ಲಿ ತಿಳಿಸಿರುವ ಚೀಟಿಯ ಒಟ್ಟಾರೆ ಮೊತ್ತ (Aggregate amount of chits)ನ್ನು ಮೀರದಂತೆ ಸಂಸ್ಥೆಯು ಚೀಟಿ ವ್ಯವಹಾರವನ್ನು ನಡೆಸತಕ್ಕದ್ದು. ಒಂದು ವೇಳೆ ಈ ಅವಕಾಶವು ಉಲ್ಲಂಘನೆಯಾದಲ್ಲಿ ಸಂಸ್ಥೆಯ ಸಂಬಂಧಪಟ್ಟವರೆಲ್ಲರನ್ನೂ ಕಾನೂನು ಕ್ರಮಕ್ಕೆ ಒಳಪಡಿಸಲಾಗುವುದು.

10. ಚೀಟಿ ನಿಧಿಗಳ ಕಾಯ್ದೆ 1982 ಕಲಂ 21ರ ಅವಕಾಶದಲ್ಲಿ ತಿಳಿಸಿರುವ ಸೋಡಿ ಪ್ರಮಾಣಕ್ಕಿಂತ ಹೆಚ್ಚಿನ ಮೊತ್ತದ ಸೋಡಿಯನ್ನು ಪಡೆದಲ್ಲಿ ಫೋರ್‌ಮನ್ ಮತ್ತು ಸಂಸ್ಥೆಯ ಎಲ್ಲಾ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.

11. ಸಂಸ್ಥೆಯು ಚೀಟಿ ಕುರಿತಂತೆ ಯಾವುದೇ ಠೇವಣಿಯನ್ನು ಸಂಗ್ರಹಿಸುವಂತಿಲ್ಲ.

12. ಕಾರ್ಯವ್ಯಾಪ್ತಿ ನಿಬಂಧಕರು ಪ್ರತಿ ಚೀಟಿ ಗುಂಪುಗಳ ಭದ್ರತೆ ಮತ್ತು ಗುಂಪು ಕಾಲಾವಧಿ ಮುಗಿದ ನಂತರ ಭದ್ರತಾ ಮೊತ್ತ ವಾಪಸ್ಸು ಮಾಡುವಲ್ಲಿ ಕಾಯ್ದೆ ಮತ್ತು ನಿಯಮಗಳ ಅವಕಾಶ ಪಾಲನೆಯಾಗಿರುವುದು ಹಾಗೂ ಯಾವುದೇ ಚೀಟಿದಾರರಿಗೆ ಚೀಟಿ ಮೊತ್ತ ಬಾಕಿ ಇಲ್ಲದಿರುವುದನ್ನು ಖಾತರಿಪಡಿಸಿಕೊಂಡು ಭದ್ರತಾ ಠೇವಣಿ ಮೊತ್ತವನ್ನು ಬಿಡುಗಡೆ ಮಾಡುವುದು. ತಪ್ಪಿದಲ್ಲಿ ಕಾರ್ಯವ್ಯಾಪ್ತಿ ನಿಬಂಧಕರು ವೈಯುಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

13. ಕಾರ್ಯವ್ಯಾಪ್ತಿ ಸಹಾಯಕ ನಿಬಂಧಕರು/ಉಪ ನಿಬಂಧಕರು ತಮ್ಮ ವ್ಯಾಪ್ತಿಯಲ್ಲಿನ ಚೀಟಿ ಸಂಸ್ಥೆಯ ವ್ಯವಹಾರಗಳನ್ನು ಕಾಲಕಾಲಕ್ಕೆ ಪರಿವೀಕ್ಷಣೆ ಮಾಡತಕ್ಕದ್ದು.

—4

14. ಚೀಟಿ ನಿಧಿಗಳ ಕಾಯ್ದೆ ಮತ್ತು ನಿಯಮಗಳ ಅವಕಾಶಗಳನ್ವಯ ಕಾಲಕಾಲಕ್ಕೆ ಸಲ್ಲಿಸಬೇಕಾದಂತಹ/ವರದಿಗಳು/ದಾಖಲೆ/ಮಾಹಿತಿ/ನಡವಳಿಗಳನ್ನು ಸಂಸ್ಥೆಯ ಫೋರ್‌ಮನ್, ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳೇ ಜವಾಬ್ದಾರಿ ಹೊಂದಿರುತ್ತಾರೆ.

15. ಚೀಟಿ ನಿಧಿಗಳ ಕಾಯ್ದೆ 1982 ಮತ್ತು ಚೀಟಿ ನಿಧಿಗಳ ನಿಯಮಗಳು 1983ರ ಎಲ್ಲಾ ಅವಕಾಶಗಳನ್ನು ಸಂಸ್ಥೆಯು ಚಾಚೂ ತಪ್ಪದೆ ಪಾಲಿಸತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ದಿ: 02-12-2021 ರಂದು ಹೊರಡಿಸಿದೆ.

ಎಸ್.ಜಿಯಾಉಲ್ಲಾ, ಭಾ.ಆ.ಸೇ
ಸಹಕಾರ ಸಂಘಗಳ ನಿಬಂಧಕರು ಹಾಗೂ
ಚೀಟಿ ನಿಬಂಧಕರು, ಕರ್ನಾಟಕ ರಾಜ್ಯ,
ಬೆಂಗಳೂರು.

ಗೆ,
ಫೋರ್‌ಮನ್,
ಪಂಚತಾರಾ ಚಿಟ್ಸ್ ಪ್ರೈವೇಟ್ ಲಿ.,
ನಂ.12, 1ನೇ ಮಹಡಿ, ಕೆನರಾ ಬ್ಯಾಂಕ್ ಹತ್ತಿರ ಗಜಾನನ ನಗರ,
ಹೆಗ್ಗನಹಳ್ಳಿ ಕ್ರಾಸ್, ಬೆಂಗಳೂರು-560091